**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹದಿಮೂರನೇ ಅಧಿವೇಶನ**

# ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–20)**

ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011ನ್ನು (2014ರ ಕರ್ನಾಟಕ ಅಧಿನಿಯಮ 38) ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಬಳಿಕೆ ಅಧಿನಿಯಮ, 2011ನ್ನು (2014ರ ಕರ್ನಾಟಕ ಅಧಿನಿಯಮ ಸಂಖ್ಯೆ 38) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-**ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011ರ (2014ರ ಕರ್ನಾಟಕ ಅಧಿನಿಯಮ 38) 2ನೇ ಪ್ರಕರಣದ (ಡಿ) ಖಂಡದಲ್ಲಿನ (i)ನೇ ಉಪಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(i) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರಡಿ ಅಧಿಸೂಚಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪರಿಮಿತಿಯ ಒಳಗಿನ ಭೂಮಿ ಹಾಗೂ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಅಧಿಸೂಚಿಸಿದ ನಗರ ಪಾಲಿಕೆಗಳ ಪರಿಮಿತಿಯ ಒಳಗಿನ ಸರ್ಕಾರ, ವಕ್ಫ್ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳು, ಸ್ಥಳೀಯ ಪ್ರಾಧಿಕಾರಗಳು, ಸರ್ಕಾರದ ಒಡೆತನ, ನಿಯಂತ್ರಣ ಹಾಗೂ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿರುವ ಭೂಮಿಯನ್ನು:

ಪರಂತು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮತ್ತು ನಗರ ಪಾಲಿಕೆಗಳ ಮಿತಿಗಳನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿನ ಭೂ ಕಬಳಿಕೆಗೆ ಸಂಬಂಧಿಸಿದ ಬಾಕಿ ವಿವಾದಗಳು ತಕ್ಷಣದಿಂದ ಕೊನೆಗೊಳ್ಳತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬೆಂಗಳೂರು ಮಹಾನಗರಪಾಲಿಕೆ ಮತ್ತು ನಗರ ಪಾಲಿಕೆಗಳ ಪರಿಮಿತಿಯೊಳಗಿನ ಸ್ಥಳಗಳನ್ನು ಹೊರತುಪಡಿಸಿ ಸದರಿ ಅಧಿನಿಯಮದ ವ್ಯಾಪ್ತಿಯಿಂದ ಎಲ್ಲಾ ಸ್ಥಳಗಳನ್ನು ಬಿಟ್ಟುಬಿಡುವುದರ ಮೂಲಕ ಗ್ರಾಮೀಣ ಪ್ರದೇಶಗಳ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಲಾದ ರೈತರ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ತಪ್ಪಿಸಲು ಕರ್ನಾಟಕ ಭೂ ಕಬಳಿಕೆ ಅಧಿನಿಯಮ, 2011 (2014ರ ಕರ್ನಾಟಕ ಅಧಿನಿಯಮ 38)ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರ್. ಅಶೋಕ**
ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಭೂ ಕಬಳಿಕೆ ಅಧಿನಿಯಮ, 2011ರ**
**(2014ರ ಕರ್ನಾಟಕ ಅಧಿನಿಯಮ ಸಂಖ್ಯೆ 38) ಉದ್ಧೃತ ಭಾಗ**

**XX XX XX**

**2. ಪರಿಭಾಷೆಗಳು .-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಧರ್ಮಾದಾಯ ದತ್ತಿ'' ಎಂದರೆ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) 2ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಪರಿಭಾಷಿಸಲಾದ ಧರ್ಮಾದಾಯ ದತ್ತಿ ;

(ಬಿ) ``ಸರ್ಕಾರ'' ಎಂದರೆ, ರಾಜ್ಯ ಸರ್ಕಾರ ;

(ಸಿ) ``ಹಿಂದೂ ಧಾರ್ಮಿಕ ಸಂಸ್ಥೆ'' ಎಂದರೆ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) 2ನೇ ಪ್ರಕರಣದ (17)ನೇ ಉಪಪ್ರಕರಣದಲ್ಲಿ ಪರಿಭಾಷಿಸಲಾದ ಹಿಂದೂ ಧಾರ್ಮಿಕ ಸಂಸ್ಥೆಗಳು;

(ಡಿ) ``ಭೂಮಿ'' ಎಂದರೆ,-

(i) ಸರ್ಕಾರಕ್ಕೆ, ವಕ್ಫ್ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳಿಗೆ, ಒಂದು ಸ್ಥಳೀಯ ಪ್ರಾಧಿಕಾರಕ್ಕೆ, ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಒಂದು ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿದ ಭೂಮಿಯನ್ನು;

(ii) ಭೂಮಿಯಲ್ಲಿ ಅಥವಾ ಅದರ ಮೇಲೆ ಇರುವ ಹಕ್ಕುಗಳು, ಭೂಮಿಯಿಂದ ಪ್ರಾಪ್ತವಾಗುವ ಪ್ರಯೋಜನಗಳು ಮತ್ತು ಭೂಮಿಗೆ ಲಗತ್ತಾಗಿರುವ ಅಥವಾ ಭೂಮಿಗೆ ಲಗತ್ತಾಗಿರುವ ಯಾವುದೇ ವಸ್ತುವಿಗೆ ಖಾಯಂ ಆಗಿ ಜೋಡಿಸಲಾದ ಕಟ್ಟಡಗಳು, ನಿರ್ಮಿತಿಗಳು ಮತ್ತು ಇತರ ವಸ್ತುಗಳನ್ನು,

- ಒಳಗೊಳ್ಳುತ್ತದೆ;

ಪರಂತು ''ಭೂಮಿ'' ಎಂಬುದರಲ್ಲಿ ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು,

(ಎ) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 94ಎ, 94ಬಿ, 94ಸಿ ಮತ್ತು 94ಸಿಸಿ ಪ್ರಕರಣಗಳ ಅಡಿಯಲ್ಲಿನ;

(ಬಿ) ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಸಾಂಪ್ರದಾಯಿಕ ಅರಣ್ಯ ನಿವಾಸಿಗಳ (ಅರಣ್ಯ ಹಕ್ಕುಗಳ ಗುರುತಿಸುವಿಕೆ) ಅಧಿನಿಯಮ, 2006ರ (2007ರ ಕಂದರ ಅಧಿನಿಯಮ 2) ಅಡಿಯಲ್ಲಿನ,

- ಮಂಜೂರಾತಿಗಾಗಿ ಬಾಕಿಯಿರುವ ಅರ್ಜಿಗಳಲ್ಲಿನ ಭೂಮಿಗಳನ್ನು ಒಳಗೊಳ್ಳತಕ್ಕದ್ದಲ್ಲ.

(ಇ) ``ಭೂ ಕಬಳಿಕೆದಾರ'' ಎಂದರೆ, ಭೂ ಕಬಳಿಕೆಯನ್ನು ಮಾಡುವ ಅಥವಾ ಮಾಡಿರುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಒಂದು ಗುಂಪು ಅಥವಾ ಒಂದು ಸಂಘ ಮತ್ತು ಇದರಲ್ಲಿ ಭೂಮಿಗಳನ್ನು ಕಾನೂನುಬಾಹಿರ ಸ್ವಾಧೀನ ತೆಗೆದುಕೊಳ್ಳುವುದಕ್ಕಾಗಿ ಅಥವಾ ಅದರ ಮೇಲೆ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಯಾವೊಬ್ಬ ವ್ಯಕ್ತಿಗೆ ಆರ್ಥಿಕ ನೆರವು ನೀಡುವ ಯಾವೊಬ್ಬ ವ್ಯಕ್ತಿ ಅಥವಾ ಅಂಥ ಭೂಮಿಗಳ ಯಾವುದೇ ಅಧಿಭೋಗದಾರರಿಂದ ಆಪರಾಧಿಕ ಭಯೋತ್ಪಾದನೆಯ ಮೂಲಕ ಬಾಡಿಗೆ, ಪರಿಹಾರ ಮತ್ತಿತರ ಶುಲ್ಕವನ್ನು ವಸೂಲು ಮಾಡುವ ಅಥವಾ ವಸೂಲು ಮಾಡಲು ಪ್ರಯತ್ನಿಸುವ ಅಥವಾ ಮೇಲೆ ಹೇಳಿದ ಯಾವುದಾದರೊಂದು ಕೃತ್ಯ ಮಾಡುವುದನ್ನು ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು ಒಳಗೊಳ್ಳುತ್ತಾನೆ, ಮತ್ತು ಅವನ ಹಿತಾಸಕ್ತಿಯ ಉತ್ತರಾಧಿಕಾರಿಗಳೂ ಒಳಗೊಳ್ಳುತ್ತಾರೆ ;

(ಎಫ್) ``ಭೂ ಕಬಳಿಕೆ'' ಎಂದರೆ, ಯಾವುದೇ ಕಾನೂನುಬದ್ಧ ಹಕ್ಕುದಾರಿಕೆಯಿಲ್ಲದೆ ಮತ್ತು ಅಂಥ ಭೂಮಿಯನ್ನು ಕಾನೂನುಬಾಹಿರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಯಾವುದೇ ಭೂಮಿಯನ್ನು ಕಬಳಿಸುವ ಅಥವಾ ಕಾನೂನುಬಾಹಿರ ಗೇಣಿಗಳು ಅಥವಾ ಗುತ್ತಿಗೆ ಮತ್ತು ಲೈಸೆನ್ಸ್ ಒಪ್ಪಂದಗಳನ್ನು ಮಾಡಿಕೊಳ್ಳುವ ಅಥವಾ ಅವುಗಳನ್ನು ಸೃಷ್ಟಿಮಾಡುವ ಅಥವಾ ಮಾರಾಟ ಅಥವಾ ಬಾಡಿಗೆಗೆ ಕೊಡಲು ಭೂಮಿಯ ಮೇಲೆ ಅಕ್ರಮ ನಿರ್ಮಿತಿಗಳನ್ನು ಕಟ್ಟುವ ಅಥವಾ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಮತ್ತು ಅಧಿಭೋಗಿಸುವುದಕ್ಕಾಗಿ ಬಾಡಿಗೆ ಮೇಲೆ ಅಥವಾ ಗುತ್ತಿಗೆ ಮೇಲೆ ಮತ್ತು ಲೈಸೆನ್ಸ್ ಆಧಾರದ ಮೇಲೆ ಅಂಥ ಭೂಮಿಗಳನ್ನು ಯಾವೊಬ್ಬ ವ್ಯಕ್ತಿಗೆ ಕೊಡುವ ಪ್ರತಿಯೊಂದು ಚಟುವಟಿಕೆ; ಮತ್ತು ``ಭೂಮಿಯನ್ನು ಕಬಳಿಸುವುದಕ್ಕೆ'' ಎಂಬುದನ್ನು ಇದಕ್ಕೆ ಅನುಸಾರವಾಗಿ ಅರ್ಥೈಸತಕ್ಕದ್ದು ;

(ಜಿ) ``ಸ್ಥಳೀಯ ಪ್ರಾಧಿಕಾರ'' ಎಂಬುದರಲ್ಲಿ ನಗರಪಾಲಿಕೆ, ಪುರಸಭೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಕೈಗಾರಿಕಾ ಉಪನಗರ, ಸುಧಾರಣಾ ಮಂಡಳಿ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವುದೇ ಸ್ಥಳೀಯ ಸ್ವಯಮಾಡಳಿತ ನಿಕಾಯ ಅಥವಾ ಸಂಸ್ಥೆ ಇವುಗಳು ಒಳಗೊಳ್ಳುತ್ತವೆ;

(ಹೆಚ್) ``ಅಧಿಸೂಚನೆ'' ಎಂದರೆ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ಒಂದು ಅಧಿಸೂಚನೆ ಮತ್ತು ``ಅಧಿಸೂಚಿತ'' ಎಂಬುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು ;

(ಐ) ``ವ್ಯಕ್ತಿ'' ಎಂಬುದು, ನಿಗಮಿತವಾಗಿರುವ ಅಥವಾ ನಿಗಮಿತವಾಗಿರದ ವ್ಯಕ್ತಿಗಳ ಒಂದು ಗುಂಪನ್ನು ಅಥವಾ ಸಂಸ್ಥೆಯನ್ನು, ಯಾವುದೇ ಕಂಪನಿಯನ್ನು ಅಥವಾ ಒಂದು ಸಂಘವನ್ನು ಒಳಗೊಳ್ಳುತ್ತದೆ;

(ಜೆ) ``ನಿಯಮಿಸಲಾದುದು'' ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ;

(ಕೆ) ``ವಿಶೇಷ ನ್ಯಾಯಾಲಯ'' ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ರಚಿತವಾದ ವಿಶೇಷ ನ್ಯಾಯಾಲಯ;

(ಎಲ್) ``ಅನಧಿಕೃತ ನಿರ್ಮಿತಿಗಳು'' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ, ಸಂಬಂಧಪಟ್ಟ ಕಾನೂನಿನ ಅಡಿಯಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಸ್ಪಷ್ಟ ಅನುಮತಿ ಪಡೆಯದೇ ನಿರ್ಮಿಸಿದ ಯಾವುದೇ ನಿರ್ಮಿತಿ;

(ಎಂ) ``ವಕ್ಫ್'' ಎಂದರೆ, ವಕ್ಫ್ ಅಧಿನಿಯಮ, 1995ರ (1995ರ ಕೇಂದ್ರ ಅಧಿನಿಯಮ 43) 3ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಲಾದ ವಕ್ಫ್.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ 374, ಪ್ರತಿಗಳು 500, 12ನೇ ಸೆಪ್ಟೆಂಬರ್, 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**THIRTEENTH SESSION**

# THE KARNATAKA LAND GRABBING PROHIBITION (AMENDMENT) BILL, 2022

**(LA Bill No. 20 of 2022)**

A Bill further to amend the Karnataka Land Grabbing Prohibition Act, 2011.

Whereas it is expedient further to amend the Karnataka Land Grabbing Prohibition Act, 2011 (Karnataka Act 38 of 2014), for the purposes hereinafter appearing;

Be it enacted by the Karnataka State Legislature in the Seventy third year of the Republic of India as follows:-

**1. Short title and commencement**.– (1) This Act may be called the Karnataka Land Grabbing Prohibition (Amendment) Act, 2022

(2) it shall come into force at once.

**2. Amendment of Section 2**.- In section 2 of the Karnataka Land Grabbing Prohibition Act, 2011 (Karnataka Act 38 of 2014),in clause (d), for sub-clause (i), the following shall be substituted, namely:-

"(i) Land within limits of the Bruhat Bengaluru Mahanagara Palike as notified under the Bruhat Bengaluru Mahanagara Palike Act, 2020 (Karnataka Act No. 53 of 2020) and land within limits of the City Corporations notified under the provisions of the Karnataka Municipal Corporations Act, 1976, belonging to the Government, Wakf or the Hindu Religious Institutions and Charitable Endowments, a local authority, a statutory or non-statutory body owned or controlled or managed by the Government:

Provided that, pending disputes relating to land grabbing in places other than the limits of Bruhat Bengaluru Mahanagara Palike and City Corporations shall stand abated forthwith."

## STATEMENT OF OBJECTS AND REASONS

It is considered necessary further to amend the Karnataka Land Grabbing Prohibition Act, 2011 (Karnataka Act No 38 of 2014) to avoid criminal proceedings against farmers who have encroached the Government Land in rural areas by excluding all the places from the purview of the said Act except the places within the limits of the Bruhat Bengaluru Mahanagara Palike and the City Corporations.

Hence the Bill.

## FINANCIAL MEMORANDUM

There is no extra expenditure involved in the proposed Legislative measure.

**R. ASHOKA**
Minister for Revenue

**M.K. VISHALAKSHI**
Secretary
Karnataka Legislative Assembly

**ANNEXURE**

**Extract from the Karnataka Land Grabbing Prohibition Act, 2011**
**(Karnataka Act 38 of 2014)**

**XXX XXX XXX**

**2. Definitions.-** In this Act, unless the context otherwise requires,-

(a) "Charitable Endowment" means Charitable Endowment as defined in sub-section (5) of section 2 of the Hindu Religious Institutions and Charitable Endowments Act, 1997 (Karnataka Act 33 of 2001);

(b) "Government" means the State Government;

(c) "Hindu Religious Institution" means the Hindu Religious Institution as defined in sub-section (17) of section 2 of the Hindu Religious Institutions and Charitable Endowments Act, 1997 (Karnataka Act 33 of 2001);

(d) "Land" includes,-

**XXX XXX XXX**

(i) land belonging to the Government, Wakf or the Hindu Religious Institutions and Charitable Endowments, a local authority, a statutory or non statutory body owned, controlled or managed by the Government;

(ii) rights in or over land, benefits to arise out of land, and buildings, structures and other things attached to the earth or permanently fastened to anything attached to the earth;

Provided that 'land' shall not include lands in respect of which applications for grant are pending on the date of commencement of this Act,-

(a) under sections 94A, 94B, 94C and 94CC of the Karnataka Land Revenue Act, 1964 (Karnataka Act 12 of 1964);

(b) under the Scheduled Tribes and other Traditional Forest Dwellers (Recognition of Forest Rights) Act, 2006 (Central Act 2 of 2007);

(e)"land grabber" means a person or group of persons or a Society, who commits or has committed land grabbing and includes any person who gives financial aid to any person for taking illegal possession of lands or for construction of unauthorised structures thereon, or who collects or attempts to collect from any occupiers of such lands rent, compensation and other charges by criminal intimidation, or who abets the doing of any of the above mentioned acts; and also includes the successors in interest;

(f) "land grabbing" means every activity of grabbing of any land, without any lawful entitlement and with a view to illegally taking possession of such land, or enter into or create illegal tenancies or lease and licences agreements construct unauthorised structures thereon for sale or hire, or give such lands to any person on rental or lease and license basis for construction, or use and occupation, of unauthorised structures; and the term "to grab land" shall be construed accordingly;

(g) "local authority" includes the Municipal Corporation, a Municipal Council, Zilla Panchayat, Taluk Panchayat, Gram Panchayat, Town Panchayat, Industrial Township, Improvement Board, Urban Development Authority and Planning Authority or any Local Self Government body or institution by whatever name called constituted under any law for the time being in force;

(h) "notification" means a notification published in the Karnataka Gazette; and the word "notified" shall be construed accordingly;

(i) "person" includes a group or body of persons, any company or an association, whether incorporated or not;

(j) "prescribed" means prescribed by rules made under this Act;

(k) 'Special Court' means a Special Court constituted under section 7;

(l) "unauthorised structures" means any structure constructed, without express permission of the concerned competent authority under relevant law for the time being in force;

(m) "Wakf" means wakf as defined in clause (r) of section 3 of the Wakf Act, 1995 (Central Act 43 of 1995).

**XXX XXX XXX**

Govt. Press, Vikasa Soudha, Bengaluru, 12th Sept, 2022, P7, W.D. 374, Copies 500